– ಒಬ್ಬಟ್ಟು, ಇಡ್ಲಿ, ವಡೆ, ಪಾಯಸ, ಪಲ್ಯಗಳು, ಕೋಸಂಬರಿ, ಕಜ್ಜಾಯ, ಚಕ್ಕುಲಿ... ಹೀಗೆ ಅಡುಗೆ ಸಾಂಗವಾಗಿ ಮಾಡಲೇಬೇಕಿತ್ತು. ಮನೆಯ ಗಂಡಸರಿಗೆ ಹೊರಗಿನ ಕಾಯಕ. ಅಟ್ಟದ ಮೇಲಿದ್ದ ಪಾತ್ರೆಗಳನ್ನು ಇಳಿಸುವುದು, ಹಸೆ, ಆರತಿ, ನಾಮಕರಣ ಹುಟ್ಟುಹಬ್ಬ ಮುಂತಾದ ಮನೆಯ ಸಣ್ಣಪುಟ್ಟ ಇಂತಹ ಕಾರ್ಯಗಳಿಗೆಂದೇ ಸಣ್ಣ ಶಾಮಿಯಾನವೊಂದನ್ನು ಮನೆಗೆ ತಂದಿಟ್ಟುಕೊಂಡಿದ್ದರಿಂದ ಅದನ್ನು ತೆಗೆದು ಮನೆಯ ಮುಂದೆ ಶಾಮಿಯಾನ ಹಾಕಿಸಿ ಕುರ್ಚಿ ಟೇಬಲ್ಲುಗಳನ್ನು ಜೋಡಿಸುವುದು, ಅಡುಗೆಗೆ ಬೇಕಾದ ಸಾಮಗ್ರಿಗಳನ್ನು ಒದಗಿಸುವುದು, ಊಟ ಬಡಿಸಲು ಹಿಂದಿನ ದಿನವೇ ತೋಟದಿಂದ ತಂದಿರಿಸಿದ್ದ ಬಾಳೆಲೆಗಳನ್ನು ಒರೆಸಿಡುವುದು, ಕುಡಿಯಲು ನೀರಿನ ಡ್ರಮ್ಮುಗಳಿಗೆ ನೀರು ತುಂಬಿಸುವುದು, ಬೆಳಿಗ್ಗೆಯೇ ತಿಂಡಿಗೆಂದು ಮಾಡಿದ್ದ ಉಪ್ಪಿಟ್ಟನ್ನು ಅಡುಗೆ ಕೋಣೆಯಿಂದ ತಂದು ಇರಿಸಿ ಎಲ್ಲರಿಗೂ ಬಡಿಸುವುದು, ಬರುತ್ತಿರುವ ನೆಂಟರಿಷ್ಟರನ್ನು ಮಾತಾಡಿಸಿ ಅವರಿಗೆ ಕಾಫಿ ತಿಂಡಿ ನೀಡುವುದು... ಹೀಗೆ ಅಲ್ಲಿದ್ದ ಗಂಡಸರಿಗೂ ಬಿಡುವಿಲ್ಲದಷ್ಟು ಕೆಲಸ. ಇನ್ನು ಅಡುಗೆ ಮನೆಯಲ್ಲಿ ಬಂದಿದ್ದ ಎಲ್ಲಾ ಹೆಂಗಸರಿಗೂ ಕೈತುಂಬಾ ಕೆಲಸ. ಮನೆ ತುಂಬಾ ಜನ ಸೇರುವುದರಿಂದ ಜೊತೆಗೆ ಎಲ್ಲಾ ಮಡಿಯಲ್ಲಿ ಆಗಬೇಕಾದುದರಿಂದ ಈ ಹಬ್ಬಕ್ಕೆ ಅಡುಗೆಯವರನ್ನು ಕರೆಸುತ್ತಿರಲಿಲ್ಲ. ಮನೆಯ ಹೆಣ್ಣುಮಕ್ಕಳು, ಅವರ ಮಕ್ಕಳು, ಸೊಸೆಯರು – ಮನೆ ತುಂಬಾ ಜನವಿರುತ್ತಿರುವುದರಿಂದ ಅಡುಗೆ ಕೆಲಸವೂ ಹೊರೆ ಎನಿಸದೆ ಎಲ್ಲರೂ ಖುಷಿಯಿಂದ, ಸಂಭ್ರಮದಿಂದ ಅಡುಗೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಹಬ್ಬದ ಹಿಂದಿನ ದಿನವೇ ಹೆಂಗಸರೆಲ್ಲ ಅಡುಗೆ ಮನೆ ಸೇರಿ ಬಿಡುತ್ತಿದ್ದರು. ಅವತ್ತೆಲ್ಲ ಮನೆಯವರಿಗೂ ನಿದ್ದೆ ಇಲ್ಲ, ಬಂದ ನೆಂಟರಿಗೂ ನಿದ್ದೆ ಇಲ್ಲ. ಬೆಳಿಗ್ಗೆಯ ಅಡುಗೆಗೆ ರಾತ್ರಿಯೆಲ್ಲಾ ಸಿದ್ಧತೆ ನಡೆಸುತ್ತಿದ್ದರು. ಯುವತಿಯರೆಲ್ಲ ತರಕಾರಿ ಹೆಚ್ಚಿಕೊಳ್ಳುವುದು, ಕಾಯಿ ತುರಿದು ಕೊಡುವುದು ಮುಂತಾದ ಹಗುರವಾದ ಕೆಲಸ ಮಾಡಿದರೆ, ಹಿರಿಯ ಹೆಂಗಸರಲ್ಲಿ ಒಬ್ಬರು ಚಕ್ಕುಲಿ ಹಿಟ್ಟು ಕಲಸಿದರೆ, ಮತ್ತೊಬ್ಬರು ಚಕ್ಕುಲಿ ಒರಳಿನಿಂದ ಚಕ್ಕುಲಿ ಸುತ್ತಿ ಕೊಡುತ್ತಿದ್ದರು. ಇನ್ನೊಬ್ಬರು ಒಲೆ ಮುಂದೆ ಕುಳಿತು ಚಕ್ಕುಲಿ ಕರಿಯುತ್ತಿದ್ದರು. ಕುಕ್ಕೆಗಟ್ಟಲೆ ಚಕ್ಕುಲಿ ಬೇಯಿಸುತ್ತಿದ್ದರು. ನಂತರ ಕಜ್ಜಾಯವನ್ನು ಬೇಯಿಸುವುದು. ಎಲ್ಲವನ್ನು ಮಡಿಯಲ್ಲಿ ಮಾಡಿ ಯಾರಿಗೂ ಒಂಚೂರು ನೀಡದೆ, ರುಚಿ ಹೇಗಿದೆ ಅಂತನೂ ನೋಡದೆ ತುಂಬಿಟ್ಟು ಬಿಡುತ್ತಿದ್ದರು.

ಬರೀ ಊಟಕ್ಕಷ್ಟೇ ಆಗಿದ್ದರೆ ಇಷ್ಟೊಂದು ತಿಂಡಿ ಬೇಕಿರಲಿಲ್ಲ. ಬಂದವರಿಗೆಲ್ಲ ಬರಿಗೈಯಲ್ಲಿ ಕಳಿಸುವಂತಿರಲಿಲ್ಲ. ಆ ಮನೆಯ ಪದ್ಧತಿಯಂತೆ ನೆಂಟರು, ಮನೆಯ ಹೆಣ್ಣುಮಕ್ಕಳು ಹೊರಡುವಾಗ ಮಡ್ಲಕ್ಕಿ ಜೊತೆ ತಿಂಡಿಗಳನ್ನು ಕಟ್ಟಿಕೊಡುತ್ತಿದ್ದರು. ಹಾಗಾಗಿಯೇ ಅಷ್ಟೊಂದು ಎಣ್ಣೆ ತಿಂಡಿ ಬೇಯಿಸುತ್ತಿದ್ದರು. ಬಾಯಿ ತುಂಬಾ ಮಾತು, ಕೈತುಂಬಾ ಕೊಡುಗೆ. ಹಾಗೆಂದೇ ಆ ಮನೆಯನ್ನು ಸ್ವರ್ಗದ ಮನೆಯೆಂದೇ ಕರೆಯುವುದು. ಬೆಳಗ್ಗೆ ಕೇಜಿಗಟ್ಟಲೆ ಬೇಳೆ ಬೇಯಿಸಿ, ಗ್ರೈಂಡರಿನಲ್ಲಿ ಹೋಳಿಗೆಗೆ ಬೆಲ್ಲ, ಕಾಯಿ, ಬೆಂದ ಬೇಳೆ ಕುದಿಸಿ ರುಬ್ಬಿ ಬೇಯಿಸಲು ನಾಲ್ಕು ಜನ ನಿಲ್ಲುತ್ತಿದ್ದರು. ಚಿತ್ರಾನ್ನ, ಮೊಸರನ್ನ, ಪಾಯಸ, ಪಲ್ಯಗಳು, ವಡೆ, ಕೋಸಂಬರಿ ಎಲ್ಲವೂ ಸಾಂಗವಾಗಿಯೇ ಮಾಡಿ ದೇವರ ಮುಂದೆ ಕಳಸ ಕೂರಿಸಿ, ಹೊಸ ಬಟ್ಟೆ ಇಟ್ಟು ಅಯ್ನೋರನ್ನು ಕೂರಿಸಿ ಪಾದಪೂಜೆ ಮಾಡಿ, ಪಾದ ತೊಳೆದ ನೀರನ್ನು ಮನೆಯ ಎಲ್ಲಾ ಕಡೆ ಪ್ರೋಕ್ಷಣೆ ಮಾಡಿ, ಎಲ್ಲರೂ ಅಯ್ನೋರ ಮುಂದೆ ಕುಳಿತು ಕರಡಿಗೆಯಿಂದ ಲಿಂಗವನ್ನು ತೆಗೆದು ಪೂಜಿಸಿ ಕ್ರಿಯೆ ತೆಗೆದುಕೊಂಡು ಅಡ್ಡ ಬೀಳುತ್ತಿದ್ದರು.

ನಂತರ ದೇವರ ಮುಂದೆ ಎರಡು ಕುಡಿ ಬಾಳೆಲೆ ಇರಿಸಿ ಮಾಡಿದ ಎಲ್ಲಾ ಅಡುಗೆಯನ್ನು ಎಡೆ ಇರಿಸಿ ಮನೆಯ ಹಿರಿಯರು ಕಿರಿಯರು ಅನ್ನದೆ ಎಲ್ಲರೂ ಪೂಜೆ ಸಲ್ಲಿಸಿ ಅಡ್ಡ ಬೀಳುವರು. ನಂತರ ಐನೋರ ಮುಂದೆ ಬಾಳೆದೆಲೆ ಇರಿಸಿ ಮಾಡಿದ ಅಡುಗೆಯನ್ನೆಲ್ಲ ಬಡಿಸಿ, ಅವರ ಮುಂದೆ ಕರ್ಪೂರ ಬೆಳಗಿಸಿ, ಅಯ್ನೋರು ಮಂತ್ರ ಹೇಳಿ ಊಟದೆಲೆಗೆ ಕೈಹಾಕಿ ಊಟ ಪ್ರಾರಂಭಿಸುವರು. ಅವರ ಜೊತೆ ಮತ್ತಷ್ಟು ಐನೋರುಗಳು ಊಟಕ್ಕೆ ಕುಳಿತುಕೊಂಡಿರುತ್ತಾರೆ. ಐನೋರ ಪಂಕ್ತಿ ಊಟ ಮುಗಿಸಿದ ನಂತರವೇ ಇನ್ನು ಉಳಿದ ಬಂಧು ಬಾಂಧವರಿಗೆ ಊಟಕ್ಕೆ ನೀಡುವುದು. ಪೂಜೆಯೆಲ್ಲ ಸಾಂಗವಾಗಿ ಮುಗಿದು ಐನೋರ ಪಂಕ್ತಿ ಊಟ ಮುಗಿಯಿತು. ರುಚಿಯಾದ ಊಟ ಮಾಡಿ 'ಊಟ ತುಂಬಾ ಚೆನ್ನಾಗಿತ್ತು ಅಲ್ವಾ' ಅಂತ ಮಾತಾಡಿಕೊಳ್ಳುತ್ತಾ ಬಂದ ನೆಂಟರೂ ಹಾಲಿನಲ್ಲಿ ಕುಳಿತು ಲೋಕಾಭಿರಾಮವಾಗಿ ಮಾತನಾಡಿಕೊಳ್ಳುತ್ತಿದ್ದರು.

ಹಬ್ಬದ ಊಟ ಮುಗಿಸಿದ ಜಗದೀಶರು ತಮ್ಮ ರೂಮಿನಲ್ಲಿ ಹಬ್ಬದ ಊಟದಿಂದ ಮೈ ಭಾರ ಅನಿಸಿ ಅಂಗೆ ಹಾಸಿಗೆ ಮೇಲೆ ಅಡ್ಡಾಗಿದ್ದರು. ಇನ್ನೇನು ನಿದ್ದೆಯ ಜೊಂಪು ಹತ್ತಬೇಕು ಅನ್ನೊ ಅಷ್ಟರಲ್ಲಿ ಅಂಬಿಕಾ ರೂಮಿನ ಬಾಗಿಲು ತಳ್ಳಿ, ಮಲಗಿದ್ದ ತಮ್ಮನನ್ನು ನೋಡಿ, 'ಜಗ, ನಿದ್ದೆ ಮಾಡ್ತಾ ಇದ್ದಿಯೇನೊ' ಅನ್ನುತ್ತಾ ಬಾಗಿಲ ತುದಿಯಲ್ಲಿಯೇ ನಿಂತು ಕೇಳಿದರು. ಅಕ್ಕನ ಧ್ವನಿ ಕೇಳಿ ಕಣ್ಣು ಬಿಟ್ಟ ಜಗದೀಶರು ಎದ್ದು ಕುಳಿತು, 'ಇಲ್ಲ ಕಣಕ್ಕ, ಅಂಗೆ ಜೊಂಪು ಹತ್ತಿತ್ತು. ಬಾ ಒಳಿಕೆ. ಅಲ್ಲೆ ಯಾಕೆ ನಿಂತ್ಕಂಡೆ. ಬಾ ಬಾ ಇಲ್ಲೆ ಕುಂತ್ಕಬಾ. ಈ ಗಲಾಟೆಲಿ ನಿದ್ದೆ ಎಲ್ಲಿ ಬತ್ತದೆ ಏಳು' ಅಂತ ಅಕ್ಕನನ್ನು ಒಳಿಕೆ ಕರೆದರು. ಅಂಬಿಕಾ ರೂಮಿನ ಬಾಗಿಲು ಪೂರ್ತಿ ತಳ್ಳಿ ಒಳಬಂದು ತಮ್ಮನ ಪಕ್ಕ ಹಾಸಿಗೆಯ ಮೇಲೆ ಕುಳಿತರು. ಹಾಗೆ ಕುಳಿತ ಅಂಬಿಕಾ ಮಾತನ್ನು ಹೇಗೆ ಪ್ರಾರಂಭಿಸಬೇಕು ಅನ್ನೋ ಗೊಂದಲಕ್ಕೊಳಗಾಗಿ ಸುಮ್ಮನೆ ಕುಳಿತಿದ್ದನ್ನು ಕಂಡ ಜಗದೀಶರು, ತಮ್ಮನ ಜೊತೆ ಏಕಾಂತವಾಗಿಯೇ ಮಾತಾಡಬೇಕು ಅಂತಲೇ ಅಕ್ಕ ತಮ್ಮನ್ನ ಹುಡುಕಿ ಬಂದಿರೋದು ಅಂತ ಗೊತ್ತು ಮಾಡಿಕೊಂಡು, ತಾವೇ ಮಾತು ಶುರು ಹಚ್ಕಂಡರು.

'ಏನಕ್ಕ, ಏನೋ ಹೇಳಬೇಕು ಅಂತ ಇದ್ದಿಯಾ ಅಲ್ವಾ, ಅದೇನು ಹೇಳಕ್ಕ, ದುಡ್ಡು ಏನದ್ರು ಬೇಕಿತ್ತಾ?' ಮೆಲ್ಲನೆ ಕೇಳಿದರು.

'ಛೇ ಛೇ, ಅದೇನು ಅಲ್ಲ ಕಣೋ. ಶುಂಠಿ ಹಾಕೋಕೆ ಕೊಟ್ಟಿದ್ದ ದುಡ್ಡನ್ನೇ ನಾನಿನ್ನು ಕೊಟ್ಟಿಲ್ಲ. ಮತ್ತೆ ಯಾವ ಮುಖ ಇಟ್ಕಂಡು ದುಡ್ಡು ಕೇಳಲಿ' ಕೊಂಚ ಸಪ್ಪಗಾದರು.

'ಅಕ್ಕ, ನಾನೇನು ಅದನ್ನ ವಾಪಸ್ಸು ಕೊಡು ಅಂತ ಹೇಳಿ ಕೊಟ್ಟಿದ್ನ, ನಂಗೆ ಶುಂಠೀಲಿ ಒಳ್ಳೆಯ ಲಾಭ ಬಂದಿತ್ತು. ಅದರಲ್ಲಿ ಸ್ವಲ್ಪ ನಿಂಗೆ ಕೊಟ್ಟಿದ್ದೀನಿ. ಅದನ್ನ ವಾಪಸ್ಸು ಮಾಡೋ ಮಾತಾಡಬೇಡ. ಈ ವರ್ಷ ಕೊಬ್ಬರೀಲಿ ಲಾಭ ಆಗೈತೆ. ಚಿನ್ನಾರಿ ಮಗಳ ಮದ್ವೆಗೆ ಅಂತ ಕೊಡ್ತಾ ಇದ್ದೀನಿ. ಮುಂದಿನ ವರ್ಷ ಮುತ್ತುಗೆ ಕೊಡೋಣ ಅಂದಕಂಡಿದೀನಿ'.

ತಮ್ಮನ ಮಾತು ಎದೆಗೆ ಹಾಲು ಸುರಿದಂಗೆ ಆಗಿ, 'ಅಲ್ಲ ಕಣೊ ಜಗ. ನೀನು ವರ್ಷ ವರ್ಷನೂ ಇಂಗೆ ಅಕ್ಕ ತಂಗೀರಿಗೆ ಕೊಡ್ತಾ ಹೋದ್ರೆ ಶಾಂಭ ಏನನ್ನಂತಳೇ? ಮಾದೇವ, ವಾರಿಜ ಅವರು ಸುಮ್ಮನಿರ್ತರಾ' ಅನುಮಾನಪಟ್ಟರು.

'ಯಾಕಕ್ಕ ಅಂಗದ್ಕತಿಯಾ, ಅವರ್ಯಾಕೆ ಇದಕ್ಕೆಲ್ಲ ತಲೆ ಹಾಕ್ತಾರೆ? ಅಷ್ಟಕ್ಕು ನೀವೇನು ಬ್ಯಾರೆಯವರಾ? ಈ ಮನೆ ಹೆಣ್ಣುಮಕ್ಕಳಲ್ಲವಾ? ನಿಮ್ಗೂ ಈ ಮನೆ ಆಸ್ತೀಲಿ ಹಕ್ಕೈತೆ. ಅದು ಅವರಿಗೂ ಗೊತ್ತು ತಾನೆ. ಅಂಗೆಲ್ಲ ಅವರು ಅಂದ್ಕಳಕಿಲ್ಲ ಕಣಕ್ಕ. ನೀನೇನು ತಲೆಕೆಡಿಸಿಕೊಳ್ಳಬೇಡ. ನಿಂಗೆ ಬೇಕಾದಾಗ ಇಂಥದ್ದು ಬೇಕು ಅಂತ ಕೇಳು. ಅದನ್ನ ಕೊಡೊ ಜವಾಬ್ದಾರಿ ನಂದು' ಎಂದು ಅಕ್ಕನ ಅನುಮಾನ ತೊಡೆದು ಹಾಕಲು ನೋಡಿದರು.

'ನಂಗೇನು ಕಡ್ಮೆ ಮಾಡಿದ್ದೀಯಾ ಜಗ ನೀನು, ನೀನು ಮಾತಾಡ್ತ ಇದ್ದರೆ ವೊಟ್ಟೆಗೆ ಹಾಲು ಸುರ್ಕಂಡಂಗಾಯ್ತು. ಈಗ ನಾನು ಬಂದಿದ್ದು ನಂಗೆ ಏನೋ ಬೇಕು ಅಂತ ಕೇಳಾಕಲ್ಲ. ನಿನ್ನತ್ರ ಒಂದು ಮಾತು ಕೇಳಬೇಕು ಅಂತ. ಅದು ಈ ಮನೆ ವಿಷ್ಯಾನೇ ಕೇಳ್ಬೇಕಾಗಿತ್ತು' ಅಂತ ತಮ್ಮನ ಮುಖ ನೋಡ್ತಾ ಕೇಳಿದರು. ಹೇಳಲೊ ಬೇಡವೊ ಅನ್ನೋ ಅನುಮಾನ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಜಗದೀಶರಿಗೆ ಆಶ್ಚರ್ಯ ಆಯಿತು. ಅಕ್ಕ ಯಾವತ್ತೂ ಹೀಗೆಲ್ಲ ಪೀಠಿಕೆ ಹಾಕಿ ಮಾತಾಡುವವಳೇ ಅಲ್ಲ. ಮನಸ್ಸಿಗನ್ನಿಸಿದ್ದನ್ನು ನೇರವಾಗಿ ಹೇಳಿ ಬಿಡುವಂಥವಳು. ಈ ರೀತಿ ಅನುಮಾನಿಸಿ ಮೀನಮೇಷ ಎಣಿಸಿ ಮಾತಾಡುತ್ತಿದ್ದಾಳೆ ಅಂದ್ರೆ ಆ ವಿಚಾರ ತುಂಬಾ ಗಂಭೀರವಾಗಿಯೇ ಇರಬೇಕು ಅಂತ ಕೊಂಚ ಚಿಂತಿತರಾದರು.

'ಅದೇನು ಹೇಳಕ್ಕ, ನನ್ನ ಹತ್ರ ಯಾಕೆ ಸಂಕೋಚ, ನೀನು ಏನು ಹೇಳಿದ್ರೂ ಅದು ಈ ಮನೆಯ ಒಳಿತಿಗಾಗೇ ಹೇಳ್ತಿಯಾ ಅಂತ ನಂಗೆ ಚೆನ್ನಾಗಿ ಗೊತ್ತು' ಎಂದು ಅಕ್ಕನಿಗೆ ವಿಶ್ವಾಸ ತುಂಬಲೆತ್ನಿಸಿದರು.

ತಮ್ಮನ ಮಾತಿನಿಂದ ಭರವಸೆ ಮೂಡಿದಂತಾಗಿ, 'ಜಗ, ಈ ಮನೆಯಲ್ಲಿ ಎಲ್ಲಾ ಮುಂಚಿನಂತಿಲ್ಲ ಅಂತ ಅನ್ನಿಸ್ತಿದೆ ಕಣೊ. ಒಳಗೆ ಬೆಂಕಿ ಹತ್ತಿ ಉರಿತಿರೊ ಹಂಗೈತೆ. ಓದ ದಪ ಬಂದಾಗ್ಲೆ ನಂಗೆ ಅನ್ನಿಸಿತ್ತು. ಆದರೆ ಸರಿಹೋಗಬಹುದು ಅಂತ ಸುಮ್ಮನಾಗಿದ್ದೆ. ಆದರೆ ಈ ದಪ ಬಂದಾಗ್ಲಿಂದ ನೋಡ್ತಾ ಇದ್ದೀನಿ. ಮನೆಯ ಹೆಂಗಸರು ಮುಂಚಿನಂತಿಲ್ಲ. ಅದು ಎಲ್ಲರಿಗೂ ಗೊತ್ತಾಗೋ ಮುಂಚೆ ಏನಾದ್ರು